# ಈ ದೌರ್ಜನ್ಯಗಳಿಗೆ ಕೊನೆ ಎಲ್ಲಿ?

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋದ 2011ರ ಸಮೀಕ್ಷೆ ಒದಗಿಸಿರುವ ಅಂಕಿ ಅಂಶಗಳನ್ನು ಗಮನಿಸಿದರೆ ಗಾಬರಿಯಾಗುತ್ತದೆ. ನಮ್ಮ ದೇಶದಲ್ಲಿ ಸರಾಸರಿ ಪ್ರತಿ 54 ನಿಮಿಷಕ್ಕೆ ಒಬ್ಬ ಮಹಿಳೆಯ ಮೇಲೆ ಅತ್ಯಾಚಾರ ನಡೆಯುತ್ತಿದೆ. ಪ್ರತಿದಿನವೂ ಸರಾಸರಿ 14 ವರದಕ್ಷಿಣೆ ಕೊಲೆಗಳು ನಡೆಯುತ್ತಿವೆ. ಸರಾಸರಿ ಪ್ರತಿ 7 ನಿಮಿಷಕ್ಕೆ ಒಂದರಂತೆ ಹೆಣ್ಣುಮಕ್ಕಳ ಮೇಲಿನ ಕ್ರಿಮಿನಲ್ ದೌರ್ಜನ್ಯದ ಪ್ರಕರಣಗಳು ವರದಿಯಾಗುತ್ತಿವೆ!



ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ಇಲ್ಲವಾಗಿಸುವ ನಿಟ್ಟಿನಲ್ಲಿ ಇತ್ತೀಚೆಗೆ ಸಾಕಷ್ಟು ಪ್ರಯತ್ನಗಳು ನಡೆಯುತ್ತಿವೆ. ನವೆಂಬರ್ 25ರಂದು ಎಲ್ಲೆಡೆ 'ಅಂತರರಾಷ್ಟ್ರೀಯ ಮಹಿಳಾ ದೌರ್ಜನ್ಯ ವಿರೋಧಿ ದಿನಾಚರಣೆ' ನಡೆಯಿತು. ಈಗ ಡಿಸೆಂಬರ್ 10ರಂದು 'ಮಾನವ ಹಕ್ಕುಗಳ ದಿನ'ವಿದೆ. ಈ ಮಧ್ಯೆ ಎಲ್ಲೆಡೆ ವಿವಿಧ ಹಂತಗಳಲ್ಲಿ ವಿಚಾರ ಸಂಕಿರಣ, ಪ್ರತಿಭಟನೆ, ಮನವಿ ಸಲ್ಲಿಕೆ– ಹೀಗೆ ನಿರಂತರ ಕಾರ್ಯಕ್ರಮಗಳು ನಡೆದು, ಮಹಿಳೆಯರ ಮೇಲಿನ ದೌರ್ಜನ್ಯಗಳ ವಿರುದ್ಧ ಸಮಾಜದಲ್ಲಿ ಅರಿವು ಮೂಡಿಸುವ ಕೆಲಸ ನಡೆದಿದೆ. ಈ ರೀತಿಯ ಕಾರ್ಯಕ್ರಮಗಳು ಒಂದೆಡೆ ನಡೆದಿರುವಂತೆಯೇ ಇನ್ನೊಂದೆಡೆ ವರದಕ್ಷಿಣೆ ಆತ್ಮಹತ್ಯೆಗಳು, ಮಹಿಳೆಯರ ಮೇಲಿನ ಅತ್ಯಾಚಾರಗಳೂ ವರದಿಯಾಗುತ್ತಲೇ ಇವೆ. ವಿಚಾರವಂತರು ಎಷ್ಟೇ ಗಟ್ಟಿ ಧ್ವನಿಯಲ್ಲಿ ಮಹಿಳೆಯರ ಹಕ್ಕುಗಳ ಬಗ್ಗೆ ವಾದ ಮಾಡಿದರೂ, ಹೆಣ್ಣಿನ ಕುರಿತು ಇರುವ ಅಸಮಾನತೆಯ ಅಂಶಗಳು ಮರೆಯಾಗುತ್ತಿಲ್ಲ. ದೌರ್ಜನ್ಯಗಳನ್ನು ತಡೆಯುವ ನಿಟ್ಟಿನಲ್ಲಿ ಸರಕಾರಗಳೂ ಸಾಕಷ್ಟು ಕಾನೂನುಗಳನ್ನು ಮಾಡಿವೆ. ಆದರೆ ಅಂತಿಮವಾಗಿ ಕಾನೂನನ್ನು ಜಾರಿಗೊಳಿಸುವಾಗ ಪುರುಷ ಪ್ರಧಾನ ಮೌಲ್ಯಗಳೇ ವಿಜೃಂಭಿಸುತ್ತವೆ. ಅದರ ಹೊರತಾಗಿಯೂ, ಮಹಿಳಾ ದೌರ್ಜನ್ಯಗಳಲ್ಲಿ ಪಾಲ್ಗೊಂಡವರಿಗೆ ಶಿಕ್ಷೆ ಆದ ಪ್ರಕರಣಗಳಿಂದ ಇತರರು ಪಾಠ ಕಲಿತಂತೆಯೂ ಕಾಣುವುದಿಲ್ಲ. ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲೇ ಇರುವ ಲೋಪದೋಷಗಳು ಮಹಿಳೆಯರ ಮೇಲಿನ ದೌರ್ಜನ್ಯ ಹೆಚ್ಚಲು ಎಡೆ ಮಾಡಿಕೊಡುತ್ತಿವೆ.

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋದ 2011ರ ಸಮೀಕ್ಷೆ ಒದಗಿಸಿರುವ ಅಂಕಿ ಅಂಶಗಳನ್ನು ಗಮನಿಸಿದರೆ ಗಾಬರಿಯಾಗುತ್ತದೆ. ನಮ್ಮ ದೇಶದಲ್ಲಿ ಸರಾಸರಿ ಪ್ರತಿ 54 ನಿಮಿಷಕ್ಕೆ ಒಬ್ಬ ಮಹಿಳೆಯ ಮೇಲೆ ಅತ್ಯಾಚಾರ ನಡೆಯುತ್ತಿದೆ. ಪ್ರತಿದಿನವೂ ಸರಾಸರಿ 14 ವರದಕ್ಷಿಣೆ ಕೊಲೆಗಳು ನಡೆಯುತ್ತಿವೆ. ಸರಾಸರಿ ಪ್ರತಿ 7 ನಿಮಿಷಕ್ಕೆ ಒಂದರಂತೆ ಹೆಣ್ಣುಮಕ್ಕಳ ಮೇಲಿನ ಕ್ರಿಮಿನಲ್ ದೌರ್ಜನ್ಯದ ಪ್ರಕರಣಗಳು ವರದಿಯಾಗುತ್ತಿವೆ! ಕಠಿಣ ಕಾನೂನುಗಳು ಇದ್ದರಷ್ಟೇ ಸಾಲದು; ಕಾನೂನಿನ ಕಟ್ಟುನಿಟ್ಟಿನ ಜಾರಿ ಮತ್ತು ಸಮಾಜದ ಮಾನಸಿಕ ಆಲೋಚನಾ ಕ್ರಮದ ಬದಲಾವಣೆಯೂ ತುರ್ತಾಗಿ ಆಗಬೇಕಾದ ಕೆಲಸ ಎನ್ನುವುದನ್ನು ಇದು ಎತ್ತಿ ತೋರಿಸುತ್ತದೆ.

ವ್ಯವಸ್ಥೆಯ ಬದಲಾವಣೆಗೆ ರಾಜಕೀಯ ಅಧಿಕಾರವೇ ಮೂಲವಾಗಿರುವ ಹಿನ್ನೆಲೆಯಲ್ಲಿ, ಸಾಮಾಜಿಕ ಭದ್ರತೆ ಒದಗಬೇಕಾದರೆ ರಾಜಕೀಯವಾಗಿ ಹೆಣ್ಣು ಸಬಲಳಾಗಬೇಕು. ಆದರೆ ಪುರುಷಪ್ರಧಾನ ಸಮಾಜ ಯಾವತ್ತೂ ರಾಜಕೀಯ ಅಧಿಕಾರದಲ್ಲಿ ಹೆಣ್ಣುಮಕ್ಕಳಿಗೆ ಸಮಪಾಲು ಕೊಡಲು ಸಿದ್ಧವಿಲ್ಲ. ಸಂಸತ್ತಿನಲ್ಲಿ, ವಿಧಾನ ಮಂಡಲಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವ ಮಸೂದೆಯ ಎಡಬಿಡಂಗಿ ಸ್ಥಿತಿ ಹಾಗೆಯೇ ಮುಂದುವರಿದಿದೆ. ಸರ್ಕಾರಿ ಅಥವಾ ಖಾಸಗಿ ಕಚೇರಿಗಳಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ನಿಷೇಧದಂತಹ ಸಾಮಾನ್ಯ ಕಾಯ್ದೆಯೂ ಸಂಸತ್ತಿನಲ್ಲಿ ಏದುಸಿರು ಬಿಡುತ್ತಿದೆ.

ಹೆಣ್ಣು ಆರ್ಥಿಕವಾಗಿ ಸ್ವಾವಲಂಬಿಯಾದರೆ ದೌರ್ಜನ್ಯದ ಪ್ರಕರಣಗಳು ಕಡಿಮೆಯಾಗುತ್ತವೆ ಎಂದು ಒಂದೆರಡು ದಶಕಗಳ ಹಿಂದೆ ನಂಬಲಾಗಿತ್ತು. ಆದರೆ ಇತ್ತೀಚಿನ ವಿದ್ಯಮಾನಗಳನ್ನು ಗಮನಿಸಿದರೆ, ಆರ್ಥಿಕ ಸಬಲತೆಯೂ ಹೆಣ್ಣಿಗೆ ಹಲವಾರು ಹೊಸ ಸಮಸ್ಯೆಗಳನ್ನು ಹುಟ್ಟು ಹಾಕುವುದು ಕಂಡುಬರುತ್ತಿದೆ. ಹೆಣ್ಣಿನ ದುಡಿಮೆಯ ಫಲದ ಮೇಲೆ ಹಕ್ಕು ಸಾಧಿಸಲು ಗಂಡ ಅಥವಾ ಅತ್ತೆ– ಮಾವಂದಿರು ಇನ್ನಿಲ್ಲದ ಯತ್ನ ನಡೆಸುವುದು ಕೌಟುಂಬಿಕ ಸಮಸ್ಯೆಗಳನ್ನು ಹೆಚ್ಚಿಸುತ್ತಿವೆ. ಇದರಿಂದಾಗಿ ವಿಚ್ಛೇದನದ ಪ್ರಕರಣಗಳೂ ಹೆಚ್ಚಾಗುತ್ತಿವೆ. ಸಾಮಾಜಿಕ ಭದ್ರತೆ ಇಲ್ಲದೆ ಕೇವಲ ಆರ್ಥಿಕ ಭದ್ರತೆ ಒದಗಿಸಿದರೂ ಸಾಲದು ಎನ್ನುವುದು ಸ್ಪಷ್ಟ. ಜಾತಿ, ಮತ, ಧರ್ಮಗಳ ಚೌಕಟ್ಟಿನೊಳಗೆ ನಡೆಯುವ ಹೆಣ್ಣಿನ ಶೋಷಣೆಯನ್ನಂತೂ 'ನಿಸರ್ಗ ಸಹಜ ನಿಯಮ' ಎಂಬಂತೆ ಬಿಂಬಿಸಲಾಗುತ್ತದೆ. ಹೆಣ್ಣು ಮಕ್ಕಳನ್ನು ಮರೆಯಲ್ಲೇ ಉಳಿಸಿ, ಸೂಕ್ತ ಶಿಕ್ಷಣವನ್ನೂ ಕೊಡದೆ, ಅಪ್ರಾಪ್ತ ವಯಸ್ಸಿನಲ್ಲಿ ಮದುವೆ ಮಾಡಿಸುವುದಾಗಲೀ; ಯಾರೋ ಉಂಡು ಬಿಟ್ಟ ಎಂಜಲೆಲೆಯ ಮೇಲೆ ಉರುಳಾಡುವ ಮಡೆಸ್ನಾನದಂತಹ ದುಷ್ಟ ಆಚರಣೆಯೇ ಆಗಲಿ; ವಿದ್ಯಾರ್ಥಿಗಳ ಸಂಖ್ಯೆ ಕಡಿಮೆ ಇದೆಯೆಂದು ಸರ್ಕಾರಿ ಶಾಲೆಗಳನ್ನು ಮುಚ್ಚುವುದೇ ಆಗಲಿ– ಎಲ್ಲವೂ ಅಂತಿಮವಾಗಿ ಮಹಿಳೆಯರ ಮೇಲಿನ ದೌರ್ಜನ್ಯಗಳು ಹೆಚ್ಚುವುದಕ್ಕೆ ಕಾರಣವಾಗುತ್ತವೆ ಎನ್ನುವುದನ್ನು ಸರಕಾರವೂ ಅರ್ಥ ಮಾಡಿಕೊಳ್ಳುತ್ತಿಲ್ಲ. ಮಹಿಳೆಯರು ಇನ್ನಷ್ಟು ಸಂಘಟಿತರಾಗಿ ಇಂತಹ ಘಟನೆಗಳನ್ನು ಎದುರಿಸುವುದೇ ಇದಕ್ಕಿರುವ ಪರಿಹಾರ ಮಾರ್ಗ. ಇಂತಹ ಹೋರಾಟಕ್ಕೆ ವಿಚಾರವಂತ ಪುರುಷರ ಬೆಂಬಲ ಎಂದಿಗೂ ಇರಬೇಕು.

■ ಬಿ.ಎಂ.ಹನೀಫ್